**ಕರ್ನಾಟಕ ವಿಧಾನಪರಿಷತ್**
**138 ನೇ ಅಧಿವೇಶನ**

(3)

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 15
ಸದಸ್ಯರ ಹೆಸರು : ಶ್ರೀ ಬಸವರಾಜ ಪಾಟೀಲ್ ಇಟಗಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : 19.07.2019
ಉತ್ತರಿಸುವ ಮಂತ್ರಿಯವರು : ಲೋಕೋಪಯೋಗಿ ಸಚಿವರು

| ಕ್ರಮ ಸಂಖ್ಯೆ | ಪ್ರಶ್ನೆಗಳು | ಉತ್ತರಗಳು |
|---|---|---|
| 1 | ರಾಯಚೂರು ಜಿಲ್ಲೆ, ದೇವದುರ್ಗ ತಾಲ್ಲೂಕಿನ ಮುಖ್ಯ ರಸ್ತೆಗಳಾದ ದೇವದುರ್ಗದಿಂದ ಗೂಗಲ್ ಹಾಗೂ ಗೂಗಲ್‌ನಿಂದ ಅರಕೇರಾ ಮಾರ್ಗದ ಸುಂಕೇಶ್ವರಾಳ ರಸ್ತೆಗಳ ಕಾಮಗಾರಿಗಳು ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು, ಬಂದಿದೆ. |
| 2 | ಬಂದಿದ್ದಲ್ಲಿ ಸರ್ಕಾರವು ತೆಗೆದುಕೊಂಡ ಕ್ರಮವೇನು ಹಾಗೂ ಈ ಕಾಮಗಾರಿಗಳನ್ನು ಪೂರ್ತಿಗೊಳಿಸಲಾಗುವುದು ಯಾವಾಗ? | (1)<u>ರಾಯಚೂರು ಜಿಲ್ಲೆ ದೇವದುರ್ಗ ತಾಲೂಕಿನ ಜಾಲಹಳ್ಳಿಯಿಂದ ಅರಕೇರಾ, ಸುಂಕೇಶ್ವರಹಾಳ ಮಾರ್ಗವಾಗಿ ಗೂಗಲ್ ಕಿ.ಮೀ.**0.00** ರಿಂದ **71.15** ರವರೆಗೆ ನಿರ್ಮಾಣ ಮಾಡುವ ಕಾಮಗಾರಿಗೆ</u> 2012-13ನೇ ಸಾಲಿನ 5054-04-337-0-01-154 ಜಿಲ್ಲಾ ಮತ್ತು ಇತರೆ ರಸ್ತೆಗಳ ಯೋಜನೆಯಡಿ ರೂ.92.00 ಕೋಟಿ ಅನುದಾನವು ಮಂಜೂರಾಗಿದ್ದ ಹಿನ್ನೆಲೆಯಲ್ಲಿ, ಟೆಂಡರ್ ಆಧಾರದ ಮೇರೆಗೆ ಈ ಕಾಮಗಾರಿಯ ಗುತ್ತಿಗೆ ನಿಗಧಿಪಡಿಸಲಾಗಿದ್ದು, ಮೂಲ ಗುತ್ತಿಗೆದಾರರು ಒಟ್ಟು 71.15ಕಿ.ಮೀ. ಅಭಿವೃದ್ಧಿ ಪಡಿಸಬೇಕಾಗಿದ್ದು ಇದರಲ್ಲಿ 41.33 ಕಿ.ಮೀ. ಅನ್ನು ಪೂರ್ಣಗೊಳಿಸಿರುತ್ತಾರೆ ಹಾಗೂ ಈ ಕಾಮಗಾರಿಗೆ ರೂ.42.79 ಕೋಟಿ ವೆಚ್ಚ ಆಗಿರುತ್ತದೆ. ಸದರಿ ಕಾಮಗಾರಿಯನ್ನು ಗುತ್ತಿಗೆದಾರರು ಕಾರಣಾಂತರಗಳಿಂದ ಪೂರ್ಣಗೊಳಿಸದ ಹಿನ್ನೆಲೆಯಲ್ಲಿ ಸರ್ಕಾರದ ಪತ್ರ ಸಂಖ್ಯೆ:ಲೋಇ 178 ಸಿಐಎಸ್ 2017, ಬೆಂಗಳೂರು ದಿನಾಂಕ 18.08.2017ರನ್ವಯ ಗುತ್ತಿಗೆಯನ್ನು ಯಥಾಸ್ಥಿತಿಯಲ್ಲಿ ಮುಕ್ತಾಯಗೊಳಿಸಲಾಗಿದೆ.<br><br>ಮುಂದುವರೆದು ಸದರಿ ರಸ್ತೆಯ ಬಾಕಿ ಉಳಿದ ಒಟ್ಟು 29.82 ಕಿ.ಮೀ ಕಾಮಗಾರಿಯನ್ನು ತೆಗೆದುಕೊಳ್ಳಲು ಅಂದಾಜು ಮೊತ್ತ ರೂ.74.29 ಕೋಟಿ (2018-19ನೇ ಸಾಲಿನ ದರಪಟ್ಟಿಗಳ ಪ್ರಕಾರ) ಅನುದಾನ ಬಿಡುಗಡೆ ಮಾಡಿ ಕಾಮಗಾರಿಗೆ ಟೆಂಡರ್ ಕರೆಯಲು ಮುಖ್ಯ ಅಭಿಯಂತರರು, ಸಂಪರ್ಕ |

| | | |
|---|---|---|
| | | ಮತ್ತು ಕಟ್ಟಡಗಳು (ಈ), ಕಲಬುರಗಿ ಇವರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಸದರಿ ಪ್ರಸ್ತಾವನೆಯು ಆರ್ಥಿಕ ಇಲಾಖೆಯ ಪರಿಶೀಲನೆಯಲ್ಲಿರುತ್ತದೆ.<br><br>(2) **<u>ರಾಯಚೂರು ಜಿಲ್ಲೆ ದೇವದುರ್ಗ ತಾಲೂಕಿನ ಗೂಗಲ್ ವಾಯಾ ಕೊಪ್ಪರ ಕಿ.ಮೀ. 0.00 ರಿಂದ 28.00 ರವರೆಗೆ ನಿರ್ಮಾಣ ಕಾಮಗಾರಿಗೆ</u>** 2012-13ನೇ ಸಾಲಿನ 5054-04-337-0-01-154 ಜಿಲ್ಲಾ ಮತ್ತು ಇತರೆ ರಸ್ತೆಗಳ ಯೋಜನೆಯಡಿ ರೂ. 33.00 ಕೋಟಿ ಅನುದಾನವು ಮಂಜೂರಾಗಿದ್ದು, ಈ ಕಾಮಗಾರಿಗೆ ಟೆಂಡರ್ ಆಧಾರದ ಮೇರೆಗೆ ಗುತ್ತಿಗೆ ನಿಗಧಿಪಡಿಸಲಾಗಿದ್ದು, ಮೂಲ ಗುತ್ತಿಗೆದಾರರು ಒಟ್ಟು 28.00 ಕಿ.ಮೀ. ಅಭಿವೃದ್ಧಿಪಡಿಸಬೇಕಾಗಿದ್ದು 5.55 ಕಿ.ಮೀ. ಅನ್ನು ಪೂರ್ಣಗೊಳಿಸಿರುತ್ತಾರೆ ಹಾಗೂ ಈ ಕಾಮಗಾರಿಗೆ ರೂ.8.48 ಕೋಟಿ ವೆಚ್ಚ ಆಗಿದ್ದು, ಆದರೆ ಸದರಿ ಕಾಮಗಾರಿಯನ್ನು ಗುತ್ತಿಗೆದಾರರು ಕಾರಣಾಂತರಗಳಿಂದ ಪೂರ್ಣಗೊಳಿಸದ ಹಿನ್ನೆಲೆಯಲ್ಲಿ ಸರ್ಕಾರದ ಪತ್ರ ಸಂಖ್ಯೆ:ಲೋಇ 178 ಸಿಐಎಸ್ 2017, ಬೆಂಗಳೂರು ದಿನಾಂಕ 18.08.2017ರನ್ವಯ ಗುತ್ತಿಗೆಯನ್ನು ಯಥಾಸ್ಥಿತಿಯಲ್ಲಿ ಮುಕ್ತಾಯಗೊಳಿಸಲಾಗಿದೆ.<br><br>ಮುಂದುವರೆದು ಸದರಿ ರಸ್ತೆಯ ಬಾಕಿ ಉಳಿದ ಒಟ್ಟು 22.50 ಕಿ.ಮೀ ಕಾಮಗಾರಿ ತೆಗೆದುಕೊಳ್ಳಲು ಅಂದಾಜು ಮೊತ್ತ ರೂ. 36.39 ಕೋಟಿ (2018-19ನೇ ಸಾಲಿನ ದರಪಟ್ಟಿಗಳ ಪ್ರಕಾರ) ಅನುದಾನ ಬಿಡುಗಡೆ ಮಾಡಿ ಕಾಮಗಾರಿಗೆ ಟೆಂಡರ್ ಕರೆಯಲು ಮುಖ್ಯ ಅಭಿಯಂತರರು, ಸಂಪರ್ಕ ಮತ್ತು ಕಟ್ಟಡಗಳು (ಈ), ಕಲಬುರಗಿ ಇವರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಸದರಿ ಪ್ರಸ್ತಾವನೆಯು ಆರ್ಥಿಕ ಇಲಾಖೆಯ ಪರಿಶೀಲನೆಯಲ್ಲಿರುತ್ತದೆ.<br><br>(3) **<u>ರಾಯಚೂರು ಜಿಲ್ಲೆ ದೇವದುರ್ಗ ತಾಲೂಕಿನ ಅರಕೇರಾ ಕ್ರಾಸ್ ವಾಯಾ ಗಲಗ ನಾರಭಂಡ ವರೆಗೆ ಕಿ.ಮೀ. 0.00 ರಿಂದ 28.20 ರವರೆಗೆ ನಿರ್ಮಾಣ ಮಾಡುವ ಕಾಮಗಾರಿಗೆ</u>** 2013-14ನೇ ಸಾಲಿನ 5054-04-337-0-01-154 ಜಿಲ್ಲಾ ಮತ್ತು ಇತರೆ ರಸ್ತೆಗಳ ಯೋಜನೆಯಡಿ ರೂ. 29.50 ಕೋಟಿ ಅನುದಾನವು ಮಂಜೂರಾಗಿದ್ದು, ಈ ಕಾಮಗಾರಿಗೆ ಟೆಂಡರ್ ಆಧಾರದ ಮೇರೆಗೆ ಗುತ್ತಿಗೆ |

| | | |
|---|---|---|
| | | ನಿಗಧಿಪಡಿಸಲಾಗಿದ್ದು, ಮೂಲ ಗುತ್ತಿಗೆದಾರರು ಒಟ್ಟು 28.20 ಕಿ.ಮೀ. ಅಭಿವೃದ್ಧಿ ಪಡಿಸಬೇಕಾಗಿದ್ದು, 22.63 ಕಿ.ಮೀ. ಅನ್ನು ಪೂರ್ಣಗೊಳಿಸಿರುತ್ತಾರೆ ಹಾಗೂ ಈ ಕಾಮಗಾರಿಗೆ ರೂ.18.78 ಕೋಟ್ಟಿ ವೆಚ್ಚ ಆಗಿದ್ದು, ಆದರೆ ಸದರಿ ಕಾಮಗಾರಿಯನ್ನು ಗುತ್ತಿಗೆದಾರರು ಕಾರಣಾಂತರಗಳಿಂದ ಪೂರ್ಣಗೊಳಿಸದ ಹಿನ್ನೆಲೆಯಲ್ಲಿ ಸರ್ಕಾರದ ಪತ್ರ ಸಂಖ್ಯೆ:ಲೋಇ 178 ಸಿಐಎಸ್ 2017, ಬೆಂಗಳೂರು ದಿನಾಂಕ 18.08.2017ರನ್ವಯ ಗುತ್ತಿಗೆಯನ್ನು ಯಥಾಸ್ಥಿತಿಯಲ್ಲಿ ಮುಕ್ತಾಯಗೊಳಿಸಲಾಗಿದೆ.<br><br>ಮುಂದುವರೆದು ಸದರಿ ರಸ್ತೆಯ ಬಾಕಿ ಉಳಿದ ಒಟ್ಟು 5.57 ಕಿ.ಮೀ ಕಾಮಗಾರಿ ತೆಗೆದುಕೊಳ್ಳಲು ಅಂದಾಜು ಮೊತ್ತ ರೂ.15.22 ಕೋಟಿ (2018-19ನೇ ಸಾಲಿನ ದರಪಟ್ಟಿಗಳ ಪ್ರಕಾರ) ಅನುದಾನ ಬಿಡುಗಡೆ ಮಾಡಿ ಕಾಮಗಾರಿಗೆ ಟೆಂಡರ್ ಕರೆಯಲು ಮುಖ್ಯ ಅಭಿಯಂತರರು, ಸಂಪರ್ಕ ಮತ್ತು ಕಟ್ಟಡಗಳು (ಈ), ಕಲಬುರಗಿ ಇವರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಸದರಿ ಪ್ರಸ್ತಾವನೆಯು ಆರ್ಥಿಕ ಇಲಾಖೆಯ ಪರಿಶೀಲನೆಯಲ್ಲಿರುತ್ತದೆ. |

ಲೋಇ 35 ಸಿಐಎಸ್ 2019(ಇ)

(ಹೆಚ್.ಡಿ. ರೇವಣ್ಣ)
ಲೋಕೋಪಯೋಗಿ ಸಚಿವರು